ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಆ ಅಧಿಕಾರಿಯ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೇವೆಂದು ಉತ್ತರ ಹೇಳಿದ್ದಾರೆ. ಒಂದು ವೇಳೆ ಕ್ರಮವನ್ನು ತೆಗೆದುಕೊಂಡಿದ್ದರೆ ಸೀಜ್ ಮಾಡಿಲ್ಲವೆಂದು ಏಕೆ ಉತ್ತರ ಹೇಳುವುದು ಆ ಎರಡು ವಿಷಯ ಸ್ವಲ್ಪ ಗೊಂದಲವಿದೆ, ಅದರ ಬಗ್ಗೆ ನನಗೆ ಮಾಹಿತಿಯನ್ನು ಕೊಡಿಸಬೇಕು.

ಶ್ರೀ ಸಿದ್ದರಾಮಯ್ಯ : ಆಯಿತು ಹೇಳುತ್ತೇನೆ.

ವಿಷಯ : ಮಲೆನಾಡು ಪ್ರದೇಶದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳ ನಡವಳಿಕೆ ಬಗ್ಗೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾವೆಲ್ಲಾ ಮಲೆನಾಡಿನ ಪ್ರದೇಶದಲ್ಲಿರುವವರು, ಕಾಡಿನ ಮಧ್ಯದಲ್ಲಿ ನಮ್ಮೆಲ್ಲ ಊರುಗಳು, ದೇವರು ನಮ್ಮನ್ನು ಅಲ್ಲಿ ಏಕೆ ಸೃಷ್ಟಿ ಮಾಡಿದನೊ ನಮಗೇನು ಗೊತ್ತಿಲ್ಲ. ನಿಮ್ಮ ಅರಣ್ಯ ಇಲಾಖೆಯವರು ನಡೆದುಕೊಳ್ಳುವ ನಡವಳಿಕೆಯನ್ನು ನೋಡಿದಾಗ, ನಮಗೆ ಈ ಭಾವನೆ ನಿಜವಾಗಲೂ ಕೂಡ ಬರುತ್ತದೆ, ನಮ್ಮ ಮಲೆನಾಡಿನಲ್ಲಿ ಹುಟ್ಟಿದವರಿಗೆ, ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಲ್ಲಿ ಸರ್ಕಾರ 127 ಹಳ್ಳಿಗಳಿಗೆ ವಿದ್ಯುದ್ದೀಕರಣ ಮಾಡುವುದಕ್ಕೆ ಹಣವನ್ನು ಮಂಜೂರು ಮಾಡಿದೆ. ಹೊಸನಗರ ತಾಲ್ಲೂಕಿಗೆ, ತೀರ್ಥಹಳ್ಳಿ ತಾಲ್ಲೂಕಿಗೆ, ಆದರೆ ನಿಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳು, ಕಂಬವನ್ನು ಹುಗಿಯಬೇಡಿ ಎಂದು ಹೇಳುತ್ತಿದ್ದಾರೆ. ನಮ್ಮ ಊರಿಗೆ ವಿದ್ಯುತ್ ಹೋಗಬೇಕಾದರೆ ಅರಣ್ಯ ಇಲಾಖೆಯ ಜಾಗದಲ್ಲಿ ಕಂಬವನ್ನು ಹುಗಿದುಕೊಂಡು ಲೈನ್ ಎಳೆದುಕೊಂಡು ಹೋಗಬೇಕು. ಅರಣ್ಯ ಒಳಗಡೆ ಊರುಗಳು ಇವೆ. ಒಂದೂ ಕಂಬವನ್ನು ನೆಡುವುದಕ್ಕೆ ಬಿಡುವುದಿಲ್ಲ, ನಾವು ಮರ ಮತ್ತು ರೆಂಬೆಯನ್ನು ಕಡಿಯುವುದಿಲ್ಲವೆಂದು ಹೇಳಿದರೂ ಕೂಡ ಕಂಬ ನೆಡುವ ಜಾಗ ನಮ್ಮದು ಎಂದು ಆ ಡಿ.ಎಫ್.ಒ. ರವರು ಹೇಳುತ್ತಾರೆ. ಸಾಗರದಲ್ಲಿ ಒಬ್ಬ ಹೆಣ್ಣು ಮಗಳು ಡಿಎಫ್ಒ ಇದ್ದಾರೆ, ಅವರಿಗೆ ಏನಾಗಿದೆ ಎಂದು ಗೊತ್ತಿಲ್ಲ. ಕಾಮನ್‌ಸೆನ್ಸ್ ಕೂಡ ಇಲ್ಲವೆ ಎಂದು ಹೇಳಿ ಐಎಫ್ಎಸ್ ಮಾಡಿಕೊಂಡು ಅಧಿಕಾರಿಗಳು ಬರುತ್ತಾರೆ. ಕಾಮನ್‌ಸೆನ್ಸ್ ಇಲ್ಲದಿದ್ದರೆ ಯಾವ ರೀತಿಯ ಅಧಿಕಾರಿಗಳು ಇವರು ಎಂದು ಗೊತ್ತಾಗುವುದಿಲ್ಲ. ಇವತ್ತು ಕಾಡು ಉಳಿದಿರತಕ್ಕಂಥದ್ದು ನಿಮ್ಮ ಅಧಿಕಾರಿಗಳಿಂದ ಅಲ್ಲ, ಕಾಡು ಉಳಿದಿರತಕ್ಕಂಥದ್ದು ನಮ್ಮ ಜನರಿಂದ, ಮಲೆನಾಡಿನಲ್ಲಿ ಹುಟ್ಟಿರತಕ್ಕಂಥ ಜನರಿಂದ, ನಾವು ಮರ ಕಡಿಯುವುದನ್ನು

ಗಿಡ ಮತ್ತು ನಾಟಾ ಕಡಿಯುವವರನ್ನು ನಾವು ವಿರೋಧಿಸುವವರು, ಅಲ್ಲಿ ಅರಣ್ಯ ಜೊತೆಯಲ್ಲಿ ನಾವು ಬದುಕಿದ್ದೇವೆ. ಇಂತಹದ್ದರಲ್ಲಿ ಇವತ್ತು ಉಪದ್ರವವನ್ನು ಕೊಡಲಿಕ್ಕೆ ಬಂದರೆ, ನಕ್ಸಲ್‌ಪೀಡಿತ ಪ್ರದೇಶದಲ್ಲಿ ಕೂಡ ಇವರು ಹೀಗೆ ಮಾಡುತ್ತಿದ್ದರು. ಅವರು ಬಂದೂಕು ತೆಗೆದುಕೊಂಡು ಕಾಡಿನಲ್ಲಿದ್ದಾರೆ ಎನ್ನುವ ಕಾರಣಕ್ಕೋಸ್ಕರವಾಗಿ ಇವರು ಕಾಡಿನೊಳಕ್ಕೆ ಫಾರೆಸ್ಟ್ರು ಮತ್ತು ಐಎಫ್‌ಎಸ್ ಅಧಿಕಾರಿಗಳೂ ಹೋಗುವುದಿಲ್ಲ. ಯಾವ ಜನ ಮರ್ಯಾದೆಯಿಂದ ಬದುಕಿದ್ದಾರೆ ಆ ಹಳ್ಳಿಗಳವರಿಗೆ ಇವರು ಗೋಳು ಕೊಡುತ್ತಿದ್ದಾರೆ. ನಮ್ಮ ಹಳ್ಳಿಯ ಜನರ ಹತ್ತಿರವು ಮಂಗಗಳನ್ನು ಹೊಡೆಯುವ ಕೋವಿಗಳು ಇವೆ. ನಾಳೆ ಅವುಗಳನ್ನು ನಮ್ಮ ಜನರು ಕೈಗೆತ್ತಿಕೊಂಡರೆ ಇವರು ಅಲ್ಲಿ ಬರುತ್ತಾರೆಯೆ ಎಂದು ನಾನು ಕೇಳುತ್ತೇನೆ. ನಮಗೆ ಅಲ್ಲಿ ಅನುಮತಿಯನ್ನು ಕೊಡಿ, ಇವರನ್ನು ಹೆದರಿಸಿಕೊಂಡು ಅಲ್ಲಿ ಕಂಬವನ್ನು ನೆಟ್ಟುಕೊಂಡು ಹೋಗುತ್ತೇವೆ ಮತ್ತು ಲೈನ್ ಎಳೆಸುತ್ತೇವೆ. ಆದರೆ ಈ ರೀತಿ ಉಪದ್ರವವನ್ನು ಕೊಡುತ್ತಾರೆಂದರೆ ದಯವಿಟ್ಟು ಮೊದಲು ಈ ಅಧಿಕಾರಿಗಳನ್ನು ಅಲ್ಲಿಂದ ತೆಗೆಯಿರಿ. ಇಲ್ಲದಿದ್ದರೆ ಈ ಅಧಿಕಾರಿಗಳಿಗೆ ಸರಿಯಾದ ಪಾಠವನ್ನು ಕಲಿಸಿರಿ, ದಯವಿಟ್ಟು ಲೈನ್ ಎಳೆಯಲಿಕ್ಕೆ ಮಾನ್ಯ ವಿಶ್ವೇಶ್ವರ ಹೆಗಡೆಯವರು ಕೂಡ ನಿನ್ನೆ ಇದೇ ವಿಷಯದ ಬಗ್ಗೆ ಹೇಳುತ್ತಿದ್ದರು. ಅವರ ಹಳ್ಳಿಯ ಹಿಂಭಾಗದಲ್ಲಿ ಒಂದು ಗುಡ್ಡವಿದೆ, ಅದು ಎತ್ತರವಾದ ಸ್ಥಳ, ಗ್ರೌಂಡ್‌ಲೆವಲ್‌ದ ಟ್ಯಾಂಕ್‌ನ್ನು ಅದನ್ನು ಕೂಡ ಕಟ್ಟುತ್ತಿಲ್ಲ, ಸಾಮಾನ್ಯ ಟ್ಯಾಂಕ್‌ನ್ನು ಕೊಂಡುಕೊಂಡು ಬಂದು ಆ ಗುಡ್ಡದ ಮೇಲೆ ಇಟ್ಟು ಸೈಫನ್ ಸಿಸ್ಟ್ಮ್‌ನಲ್ಲಿ ನೀರು ತೆಗೆದುಕೊಂಡು ಹೋಗುತ್ತೇವೆಂದು ಹೇಳಿದರೆ ಅದನ್ನು ಹೋಗಿ ನಿಲ್ಲಿಸುತ್ತಾರೆ. ನಮ್ಮ ಊರಿನಲ್ಲಿ ನೀರಿನ ಟ್ಯಾಂಕ್‌ನ್ನು ಕಟ್ಟುವುದಕ್ಕೆ ಬಿಡುವುದಿಲ್ಲ, ಕರೆಂಟ್ ಎಳೆಯುವುದಕ್ಕೆ ಬಿಡುವುದಿಲ್ಲ, ಆ ರೀತಿಯಲ್ಲಿ ವಿದ್ಯುದ್ದೀಕರಣ ಇಲ್ಲ, ಇವತ್ತು ಮನುಷ್ಯ ಚಂದ್ರಲೋಕದಲ್ಲಿ ಸೈಟ್‌ಗಾಗಿ ಅರ್ಜಿ ಹಾಕುತ್ತಿದ್ದಾನೆ. ಅಂತಹ ಒಂದು ವೇಗದಲ್ಲಿ ನಾಗರಿಕತೆ ಇವತ್ತು ಹೋಗುತ್ತಿದೆ. ನಮ್ಮ ಹಳ್ಳಿಗಳಿಗೆ ಇರುವ ಚಿಮಣಿ ಬುಡ್ಡಿ ಹೋಗಿ ಕರೆಂಟ್ ಬರುವುದಕ್ಕೆ ಇವರು ಉಪದ್ರವವನ್ನು ಕೊಡುತ್ತಿದ್ದಾರೆ. ಈ ರೀತಿಯಾದ ತೊಂದರೆಯನ್ನು ಕೊಡತಕ್ಕಂಥ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿರತಕ್ಕಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಿಮ್ಮ ಕಾಡು ಉಳಿಯುವುದಿಲ್ಲ. ಜನ ಸಿಟ್ಟು ಬಂದು ಆ ಕಾಡಿಗೆ ಬೆಂಕಿ ಹಚ್ಚುತ್ತಾರೆ. ಕಾಡು ಇರುವುದರಿಂದ ಉಪದ್ರವವಾಗುತ್ತದೆಂದು ಹೇಳಿ, ಇವತ್ತು ನಿಮ್ಮ ಬೆಲೆಬಾಳುವಂಥ ಕಾಡು ಉರಿದು ಹೋಗುತ್ತದೆ. ನಿಮ್ಮ ಅಧಿಕಾರಿಗಳಿಗೆ ಕಾಡು ಉರಿಯುವಾಗ ಸಹಾಯ ಮಾಡಲಿಕ್ಕೆ ನಮ್ಮ ಜನರು ಬೇಕು, ಅದನ್ನು ಆರಿಸುವುದಕ್ಕೆ. ಆದ್ದರಿಂದ ದಯಮಾಡಿ

ಕ್ರಮ ತೆಗೆದುಕೊಳ್ಳಬೇಕು, ಸರಿಯಾದ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆಂದು ಹೇಳುತ್ತಾ ಅರಣ್ಯ ಇಲಾಖೆಯಿಂದ ನಮಗೆ ಉಪಕಾರವಾಗಬೇಕು. ಅರಣ್ಯ ಉಳಿಸುವುದಕ್ಕೆ ನಮ್ಮ ಸಹಯೋಗವನ್ನು ಜೋಡಿಸಬೇಕು, ನಮ್ಮ ಹಳ್ಳಿಗಳಿಗೆ ಈ ನಾಗರಿಕ ಸೌಲಭ್ಯಗಳು ಬಂದು ತಲುಪುವುದಕ್ಕೆ ಅವರು ಅಡಚಣೆಯನ್ನು ಮಾಡಬಾರದೆಂದು ಹೇಳಿ, ನಾನು ತಮ್ಮ ಮೂಲಕ ಮಾನ್ಯ ಅರಣ್ಯ ಸಚಿವರಿಗೆ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಲೆನಾಡು ಜಿಲ್ಲೆಗಳಲ್ಲಿ ಈ ರೀತಿಯ ಗೋಳು ದಿನದಿಂದ ದಿನಕ್ಕೆ ಬಹಳ ದೊಡ್ಡದಾಗುತ್ತಿದೆ. ಮಲೆನಾಡು ಕಡೆಗಳಲ್ಲಿ ಈ ರೀತಿಯ ಸಮಸ್ಯೆಗಳು ದಿನದಿಂದ ದಿನಕ್ಕೆ ಉಲ್ಬಣವಾಗುತ್ತಿದೆ. ಹಾಗಾಗಿ ವಿಶೇಷವಾಗಿ ಇವರು ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಈ ರೀತಿಯಾಗಿ ತೊಂದರೆ ಕೊಟ್ಟರೆ ಜನ ಆಕ್ರೋಶಗೊಳ್ಳುವುದು ಸಹಜ ಇದೆ. ಹಾಗಾಗಿ ಅಭಿವೃದ್ಧಿ ಕೆಲಸಕ್ಕೆ ಸಹಕರಿಸುವ ರೀತಿಯಲ್ಲಿ ಅಧಿಕಾರಿಗಳು ಎಲ್ಲಾ ಸ್ತರದ ಜನಪ್ರತಿನಿಧಿಗಳ ವಿಶ್ವಾಸದಿಂದ ಅಭಿವೃದ್ಧಿ ಕೆಲಸ ಆಗುವುದಕ್ಕೆ ಬೇಕಾಗಿರುವಂತಹ ರೀತಿಯಲ್ಲಿ ಸೂಚನೆಯನ್ನು ಅರಣ್ಯ ಇಲಾಖೆಯಿಂದ ಕಳುಹಿಸದೆ ಹೋದರೆ, ಮಾನ್ಯ ಅಧ್ಯಕ್ಷರೆ, ನಾನೇ ಹೇಳುತ್ತೇನೆ, ನಾನು ಮೊನ್ನೇನೂ ಹೇಳಿದೆ, ನನ್ನಂತಹವನೆ ನಿಂತು ಆರ್‌ಎಫ್‌ಓ ಯಾರು ಬಾ ಎದುರಿಗೆ ಎಂದು ಹೇಳಬೇಕಾಗುತ್ತದೆ. ನಾನು ಈ ಭಾವನೆಯನ್ನು ಹೊಂದುವಂತಹ ಸ್ಥಿತಿಗೆ ಹೋಗಿದ್ದೇನೆಂದರೆ ಸಾಮಾನ್ಯ ಜನರ ಕಷ್ಟ ಏನು ಎಂದು ಅರ್ಥ ಮಾಡಿಕೊಳ್ಳಬೇಕು. ನಾನು ಹೇಳಿದೆ ನೀರಿನ ಟ್ಯಾಂಕ್ ಸಿಸ್ಟಂ ತೆಗೆದುಕೊಂಡು ಹೋಗಿ ಇಡುವುದು. ಅದನ್ನು ನಿಮ್ಮ ಅರಣ್ಯ ಜಾಗದಲ್ಲಿ ಇಡುತ್ತಾರೆ. ಆದರೆ ನಮ್ಮದು 80 ಪರ್ಸೆಂಟ್ ಫಾರೆಸ್ಟ್ ಇದೆ. ಟೆಕ್ನಿಕಲಿ, ನಾವು ಎಲ್ಲಿ ಹೆಜ್ಜೆ ಇಟ್ಟರೂ ಅರಣ್ಯದಲ್ಲೇ ಇಡಬೇಕು. ಸಮುದ್ರದಲ್ಲಿ ಇರುವ ನೀರಿಗೆ ಕುಡಿದ ನೀರೆಷ್ಟು, ಬಿಟ್ಟ ನೀರೆಷ್ಟು ಎನ್ನುವ ಹಾಗೆ ನಮ್ಮ ಪರಿಸ್ಥಿತಿ ಇದೆ. ನಾವು ಅಲ್ಲೇ ಅರಣ್ಯದಲ್ಲೇ ಇರುವವರು. ಇವರು ಒಂದು ನೀರಿನ ಟ್ಯಾಂಕ್ ತೆಗೆದುಕೊಂಡು ಹೋಗಿ ಟ್ಯಾಂಕ್ ಸಿಸ್ಟಂ ಇಡಬೇಕು ಎಂದರೆ ಬರುತ್ತಾರೆ ಆರ್‌ಎಫ್‌ಓ, ಎಸಿಎಫ್ ಅವ, ಇವ ಎಂದು. ನಾನು ಮೂರು ಬಾರಿ ಹೇಳಿದ್ದೇನೆ, ಇನ್ನೂ ಮಾಡುವುದಕ್ಕೆ ಕೊಡಲಿಲ್ಲ. ಹೀಗಾದರೆ ನಮಗೆ ಏನು ತಲೆ ಕೆಡದೆ ಹೋಗುತ್ತದೆ ಏನು ? ನಮಗೆ ಸಿಟ್ಟು ಬರದೆ ಹೋಗುತ್ತದೇನು ? ನಾವು ಮನುಷ್ಯರು ಅಲ್ಲವೇನು ? ನಿಮ್ಮ ಇಲಾಖೆಯ ಕಾರಣದಿಂದ ನಮ್ಮಂಥವರು ಸಿಟ್ಟಿಗೆದ್ದು ನಾಳೆ ಕಾನೂನನ್ನು ಕೈಗೆ ತೆಗೆದುಕೊಳ್ಳುವಂತಹ ಸ್ಥಿತಿ ಬರುತ್ತದೆ. ಅದಕ್ಕೆ ಇವರಿಗೆ

ಮಾನವೀಯ ಸ್ಪಂದನವೆ ಇಲ್ಲದೆ ಇರುವಂತಹ, ಇವರು ಜನರಿಂದ ದೂರ ಆಗುತ್ತಿರುವುದರಿಂದ, ಇವರು ಅರಣ್ಯದಲ್ಲಿ ಇರಬೇಕು ಅಧಿಕಾರಿಗಳು, ಅಂತಹ ಅಧಿಕಾರಿಗಳು ಇದ್ದಾರೆ. ಇವರನ್ನು ತಂದು ನಮ್ಮಂತಹ ಮನುಷ್ಯರ ಮಧ್ಯದಲ್ಲೇ ಇಟ್ಟಿರುವುದು ತಪ್ಪು ಎನ್ನುವಂತಹ ಸ್ಥಿತಿ ಇದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಈಗ ನಾನು ಹೇಳುತ್ತೇನೆ ಕೇಳಿ. ಕುಡಿಯುವ ನೀರಿಗೆ ಯಾವತ್ತು ತೊಂದರೆ ಮಾಡುವುದಿಲ್ಲ. ಯಾವುದೆ ಇರಲಿ ಶಾಲೆ ಕಟ್ಟುವುದು ಹಾಗೂ ಕುಡಿಯುವ ನೀರು ವಿಚಾರದಲ್ಲಿ ಒಂದು ಹೆಕ್ಟೇರ್‌ಗಿಂತ ಒಳಗಡೆ ಇದ್ದರೆ .... ಒಂದು ನಿಮಿಷ ನಾನು ಮುಗಿಸಿ ಕುಳಿತುಕೊಳ್ಳುತ್ತೇನೆ.

ಶ್ರೀ ಕೆ.ಜೆ. ಬೋಪಯ್ಯ : ನಮ್ಮ ಕೊಡಗು ಜಿಲ್ಲೆಯಲ್ಲಿ ಇದೆ ಸಮಸ್ಯೆ. ಒಂದು ಊರಿನಿಂದ ಒಂದು ಊರಿಗೆ ಹೋಗುವುದಕ್ಕೆ ಅರಣ್ಯ ಮಧ್ಯೆ ಹೋದರೆ ಅಲ್ಲಿ ರಸ್ತೆ ರಿಪೇರಿಗೆ ಬಿಡುತ್ತಿಲ್ಲ. ಟ್ಯಾಂಕ್ ಕಟ್ಟುವುದಕ್ಕೂ ಬಿಡುತ್ತಿಲ್ಲ.

ಅಧ್ಯಕ್ಷರು : ಆಯಿತು, ಮಲೆನಾಡಿನಲ್ಲಿ ಎಲ್ಲಾ ಕಡೆ ಅದೇ ಪರಿಸ್ಥಿತಿ ಇದೆ. ಮಾನ್ಯ ಸಚಿವರು ಸಮಗ್ರವಾಗಿ ಹೇಳುತ್ತಾರೆ.

ಒಬ್ಬರು ಮಾನ್ಯ ಸದಸ್ಯರು : ದನ ಮೇಯಿಸುವುದಕ್ಕೆ ಹೋದರೆ ಕೇಸ್ ಹಾಕುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆ ಕೇಳಿದ ಮೇಲೆ ಅದಕ್ಕೆ ಉತ್ತರ ಹೇಳಬೇಕಲ್ಲ, ನನಗೆ ಅವಕಾಶ ಕೊಡಿ, ಕುಡಿಯುವ ನೀರಿನ ವಿಚಾರದಲ್ಲಿ ಯಾವುದೇ ತೊಂದರೆ ಮಾಡುವುದಿಲ್ಲ. ಒಂದು ಹೆಕ್ಟೇರ್ ಒಳಗಡೆ ಇದ್ದರೆ ಪರ್ಮಿಷ್‌ನ್ ಕೊಡುತ್ತೇವೆ, ಒಂದು ಹೆಕ್ಟೇರ್ ಮೇಲೆ ಇದ್ದರೆ ಕೊಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ವಿಷಯ ಏನೆಂದರೆ ಮಲೆನಾಡಿನ ಯಾವುದೇ ಭಾಗದಲ್ಲಿ ವಿದ್ಯುತ್ ಸಂಪರ್ಕಕ್ಕೆ ನಾವು ಎಲೆಕ್ಟ್ರಿಕ್ ಲೈನ್ ತೆಗೆದುಕೊಂಡು ಹೋಗಬೇಕು. ಆ ವಿದ್ಯುತ್ ಲೈನ್‌ಗಳನ್ನು ತೆಗೆದುಕೊಂಡು ಹೋಗುವಂತಹ ಕಾಲದಲ್ಲಿ ಸಾಧ್ಯವಾದಷ್ಟು ಮರಗಳನ್ನು ಕಡಿಯದೆ ಮರಗಳ ಕೊಂಬೆಗಳನ್ನು ಸರಿಸಿ ಲೈನ್ ತೆಗೆದುಕೊಳ್ಳದೆ ಇದ್ದರೆ ಅಲ್ಲಿ ವಿದ್ಯುತ್ ಸರಬರಾಜು ಮಾಡುವುದಕ್ಕೆ ಆಗುವುದಿಲ್ಲ. ಅದು

ಕುಡಿಯುವ ನೀರಿನ ವಿಚಾರ ಇರಬಹುದು, ಅಥವಾ ಸ್ಟ್ರೀಟ್ ಲೈಟ್ ಇರಬಹುದು. ಅದಕ್ಕೆ ಎಲ್ಲಾ ಕಡೆ ಅಡ್ಡಿ ಮಾಡುತ್ತಿದ್ದಾರೆ. ಕಾಡನ್ನು ರಕ್ಷಣೆ ಮಾಡಬೇಕೆಂದು ಆ ಗ್ರಾಮದ ಜನ ಕಾಡನ್ನು ಉಳಿಸಿಕೊಳ್ಳುವುದಕ್ಕೆ ಪ್ರಾಣ ಕೊಡುವುದಕ್ಕೆ ಸಿದ್ದರಿದ್ದಾರೆ. ಅವರ ಜೊತೆ ಜಿಲ್ಲಾಟ ಮಾಡದೆ ಅಲ್ಲಿ ವಿದ್ಯುತ್ ಲೈನ್ ಹೋಗುವುದಕ್ಕೆ, ಕುಡಿಯುವ ನೀರಿನ ವ್ಯವಸ್ಥೆಗೆ, ವಿದ್ಯುದೀಪದ ವ್ಯವಸ್ಥೆಗೆ ಅಡ್ಡಿ ಮಾಡಬೇಡಿ ಎಂದು ಸಭೆ ಕರೆದು ಅಧಿಕಾರಿಗಳಿಗೆ ಸೂಚನೆ ಕೊಡಿ. ಇಲ್ಲಿ ಒಂದು ಎಕರೆ, ಎರಡು ಎಕರೆ ಪ್ರಶ್ನೆ ಬರುವುದಿಲ್ಲ. ಕಂಬದ ಲೈನ್ 5 ಕಿಲೋಮೀಟರ್ ಉದ್ದಕ್ಕೂ ಹೋಗಬೇಕಾಗುತ್ತದೆ. ಪ್ರಶ್ನೇನೆ ಅದು, ಅದಕ್ಕೆ ಅಡ್ಡಿ ಮಾಡದ ಹಾಗೆ ನೋಡಿಕೊಳ್ಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅದು ನನಗೆ ಗೊತ್ತಾಯಿತು, ಮಾನ್ಯ ಹೆಗಡೆಯವರು ನೀರಿನ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಹೇಳಿದರು, ಅದಕ್ಕೆ ನಾನು ಹೇಳಿದೆ. ಈಗ ಮಾನ್ಯ ಅರಗ ಜ್ಞಾನೇಂದ್ರರವರು ಏನು ಹೇಳಿದ್ದಾರೆ ಅದನ್ನು ನಾನು ಒಪ್ಪಿದ್ದೇನೆ. ಆದರೆ ಇದರ ಬಗ್ಗೆ ನಮಗೆ ಆದೇಶ ಕೊಡುವುದಕ್ಕಾಗುವುದಿಲ್ಲ, ಆದರೆ ಅದರ ಬಗ್ಗೆ ಸೂಚನೆಯನ್ನು ಕೊಡುತ್ತೇನೆ. ವೈಲ್ಡ್ ಲೈಫ್‌ನಲ್ಲಂತೂ ಒಳಗೆ ಹೋಗುವುದಕ್ಕೆ ಬರುವುದೆ ಇಲ್ಲ. ಕನ್ಸರ್ವೇಷನ್ ಆಕ್ಟ್ ಬಂದಮೇಲೆ ಬಹಳ ತೊಂದರೆ ಇದೆ. ಅದರ ಬಗ್ಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಸುಪ್ರೀಂ ಕೋರ್ಟ್ ಡೈರೆಕ್ಷನ್ ಇದೆ. ಎಲ್ಲಿ ಅಭಯಾರಣ್ಯ ಇದೆ. ಅಂತಹ ಕಡೆ ಮರ ಕಡಿಯಬಾರದು. ಬೇಕಾದರೆ ಕೊಂಬೆಕಡಿದು ಎಲ್ಲ ತೆಗೆದುಕೊಂಡು ಇದರ ಬಗ್ಗೆ ಆದೇಶ ಕೊಡಿ ಎಂದರೆ ಬರೆದು ಕಳುಹಿಸುವುದಕ್ಕೆ ಆಗುವುದಿಲ್ಲ. ಆದರೆ ಅಧಿಕಾರಿಗಳಿಗೆ ನಾನು ಹೇಳುತ್ತೇನೆ. ಜನ ಅಲ್ಲಿ ಕೆಲಮ ಮಾಡಿಕೊಳ್ಳಲಿ, ಸಾರ್ವಜನಿಕ ಕೆಲಸಕ್ಕೆ ತೊಂದರೆ ಮಾಡಬೇಡಿ, ಅಡ್ಡಿ ಮಾಡಬೇಡಿ ಎನ್ನುವಂತಹ ಸೂಚನೆಯನ್ನು ಅವರೆಲ್ಲರಿಗೂ ಕೊಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಅಲ್ಲಿರುವಂತಹ ಸಾರ್ವಜನಿಕರಿಗೆ, ಇದರಲ್ಲಿ ನಮ್ಮ ಬದುಕಿನ ಪ್ರಶ್ನೆ ಇದೆ ಸರ್. ದಯವಿಟ್ಟು ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ಅವರು ಹೇಳಿದ್ದಾರಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಭಯಾರಣ್ಯದಲ್ಲಿ ಯಾರು ಅಲ್ಲಿದ್ದಾರೆ, ಅವರನ್ನು ಒಕ್ಕಲೆಬ್ಬಿಸುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಒಕ್ಕಲೆಬ್ಬಿಸುವುದಲ್ಲ ಸ್ವಾಮಿ, ಅವರಿಗೆ ನಾಗರೀಕ ಸೌಲಭ್ಯವನ್ನೆ ನೀವು ಕೊಡದೆ ಇದ್ದರೆ ಸರಿಯಾಗಿ ಹೇಗೆ ? ಕರೆಂಟ್ ಕೊಡದೆ ಇದ್ದರೆ ಹೇಗೆ ? ಇಲ್ಲದೆ ಇದ್ದರೆ ಆ ಹಳ್ಳಿಗಳನ್ನು ಶಿಫ್ಟ್ ಮಾಡಿ. ಹೋಗಲಿ, ಶಿಫ್ಟ್ ಮಾಡುತ್ತೀರಾ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅವರು ಹೊರಗಡೆ ಬಂದರೆ ಪುನರ್ವಸತಿ ಮಾಡುವುದಕ್ಕೆ ತಯಾರಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಎಲ್ಲಿ ಸಾರ್ ನಿಮ್ಮಿಂದ ಅವುಗಳನ್ನೆಲ್ಲಾ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಅವರಿಗೆ ಅಷ್ಟು ಜಮೀನು ಕೊಡುತ್ತೀರ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅವರಿಗೆ ಜಮೀನು ಎಲ್ಲೆಲ್ಲಿ ಕೊಡಬೇಕು ಕೋಡೋಣ, ಅವರಿಗೆ ಬೇರೆ ಕೆಲಸ ಹಚ್ಚೋಣ.

ಶ್ರೀ ಅರಗ ಜ್ಞಾನೇಂದ್ರ : ಇಲ್ಲ ಸಾರ್ ನಿಮ್ಮಿಂದ ಆಗುವುದಿಲ್ಲ, ಮುಳುಗಡೆಯಾದಂತಹ ವರಾಹಿ ಯೋಜನೆಯಲ್ಲಿ ನಮ್ಮ ಜನರಿಗೆ ನೀವು ರಿಹ್ಯಾಬಿಲೆಟೇಷನ್ ನೀವು ಏನೂ ಮಾಡಲಿಲ್ಲ.

ಅಧ್ಯಕ್ಷರು : ಅವರು ಕೇಳುತ್ತಿರುವುದು ಒಂದು ಪೋಲ್ ಇಡುವುದು ಹಾಗೂ ಒಂದು ಕುಡಿಯುವ ನೀರಿಗೆ ಒಂದು ಸಿಸ್ಟಂ ಇಡತಕ್ಕಂಥಾದ್ದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅದೂ ಒಪ್ಪಿಕೊಂಡಿದ್ದೇನೆ ಸರ್, ಸಿಸ್ಟಂ ಗೆ ಒಪ್ಪಿಕೊಂಡಿದ್ದೇನೆ. ಶಾಲೆ ಕಟ್ಟುವುದರ ವಿಚಾರದಲ್ಲಿ ಒಪ್ಪಿಕೊಂಡಿದ್ದೇನೆ.

ಅಧ್ಯಕ್ಷರು : ನೀವು, ನಾಗರೀಕ ಸೌಲಭ್ಯ ಕೊಡಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆಯಾ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಒಪ್ಪಿಕೊಂಡಿದ್ದೇವೆ ಸರ್, ಕುಡಿಯುವ ನೀರಿಗೆ ಹಾಗೂ ಶಾಲೆಯ ವಿಚಾರದಲ್ಲಿ ಒಪ್ಪಿಕೊಂಡಿದ್ದೇವೆ.

ಅಧ್ಯಕ್ಷರು : ಆಯಿತು, ಅದನ್ನು ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಂಕೋಲಾದಲ್ಲಿ ಕೋಡಸಣಿ ಎನ್ನುವಂತಹ ಹಳ್ಳಿಯಲ್ಲಿ ಜಲನಿರ್ಮಲದಲ್ಲಿ ಒಂದೂವರೆ ಲಕ್ಷ ರೂಪಾಯಿ ಮಂಜೂರಾಗಿದ್ದರೆ, ಅಲ್ಲಿ ಸಿಸ್ಟಂ ಇಡುವುದಕ್ಕೆ ಕೊಡುತ್ತಿಲ್ಲ, ಅಲ್ಲೆ ಫೌಂಡೇಷನ್ ಆಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅದಕ್ಕೆ ಆದೇಶ ಕೊಡುತ್ತೇನೆಂದು ಹೇಳುತ್ತೀನಿ ಯಾರೂ ಕೇಳುತ್ತಿಲ್ಲ.

ಅಧ್ಯಕ್ಷರು : ಆಯಿತು ಒಪ್ಪಿಕೊಂಡಿದ್ದಾರೆ ಬಿಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸ್ವಾಮಿ ಅಧಿಕಾರಿಗಳನ್ನು ಕರೆದು ನಾನು ಆದೇಶ ಕೊಡುತ್ತೇನೆ, ಮೊದಲೆ ಹೇಳಿದ್ದೇನೆ, ನಿಮಗೆ ಇನ್ನೇನು ಹೇಳಲಿ.

ಅಧ್ಯಕ್ಷರು : ನಾಗರೀಕ ಸೌಲಭ್ಯವನ್ನು ಒದಗಿಸುವುದಕ್ಕೆ ನಾವು ಸ್ಪಷ್ಟವಾದ ಸೂಚನೆಯನ್ನು ಕೊಡುತ್ತೇವೆಂದು ಹೇಳಿದ್ದಾರಲ್ಲ, ಅಲ್ಲಿ ಅದು ಆಗುತ್ತಿಲ್ಲವೆಂದು ತಾನೆ ಪ್ರಶ್ನೆ ಇರುವುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸಾರ್ವಜನಿಕ ಸೌಲಭ್ಯದ ವಿಚಾರವಾಗಿ ಒಂದು ಹೆಕ್ಟೇರ್ ಇದ್ದರೆ ನಾನು ಅಧಿಕಾರಿಗಳಿಗೆ ಡೈರೆಕ್ಷನ್ ಕೊಡುತ್ತೇನೆ. ಅವರಿಗೆ ಸೂಚನೆ ಕೊಡುತ್ತೇನೆ, ಅದರ ಬಗ್ಗೆ ಚಿಂತೆ ಇಲ್ಲ.

ಅಧ್ಯಕ್ಷರು : ಅದು ಆಯಿತು ಬಿಡಿ, ಈಗ ನೆಹರು ಓಲೇಕಾರ್ ಇದ್ದಾರ ?

ಒಬ್ಬರು ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನೀವು ಮಾನ್ಯ ಜೀವರಾಜ್ ರವನ್ನು ಕರೆದಿದ್ದಿರಿ.

ಅಧ್ಯಕ್ಷರು : ನೆಹರು ಓಲೇಕಾರ್ ಇದ್ದಾರೆಯೆ ?

ಒಬ್ಬರು ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನನಗೆ ನೀವು ಅವಕಾಶ ಕೊಟ್ಟಿದ್ದಿರಿ.

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಅಂಡರ್‌ಗ್ರೌಂಡ್ ಕೇಬಲ್ ಹಾಕಿಸಲಿಕ್ಕೆ ನೀವು ಮತ್ತು ಕೆ.ಇ.ಬಿ ಯವರು ಮಾತನಾಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಎಲ್ಲರೂ ಒಂದೇ ಸರ್, ನಾನು ಎಲ್ಲರೂ ಮಾತನಾಡುವುದನ್ನು ಕೇಳಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಇಲ್ಲ ಆಯಿತು, ನಿಮ್ಮ ಪ್ರಶ್ನೆ ಮುಗಿಯಿತು. ಕುಳಿತುಕೊಳ್ಳಿ. ಯೋಗೀಶ್ ಭಟ್ ರವರೆ ತಾವು ಕೇಳಿ.

ಮಾನ್ಯ ಸದಸ್ಯರೊಬ್ಬರು : ಮಾನ್ಯ ಅಧ್ಯಕ್ಷರೆ, ಅರಣ್ಯದ ಬಗ್ಗೆ ಒಂದು ಸ್ವಲ್ಪ ...

ಅಧ್ಯಕ್ಷರು : ಇಲ್ಲ ದಯಮಾಡಿ ಕುಳಿತುಕೊಳ್ಳಿ, ಮತ್ತೆ, ಮತ್ತೆ ಕೇಳುವುದಕ್ಕೆ ಅವಕಾಶ ಇಲ್ಲ. ಇದೇನು ನೀವು ಚರ್ಚಾ ಅವಧಿ ಎಂದು ತಿಳಿದುಕೊಂಡಿದ್ದೀರೇನು ? ನೋಡಿ ಸಾಕಷ್ಟು ಜನರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಇದು ಅತಿಯಾಯಿತು. ಇಲ್ಲ, ಯೋಗೀಶ್ ಭಟ್ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಲೈನ್ ಎಳೆಯುವುದಕ್ಕೆ ತೊಂದರೆ ಮಾಡುವುದಿಲ್ಲವೆಂದು ಹೇಳುತ್ತಿದ್ದೇನೆ. ಇನ್ನೇನು ಹೇಳಬೇಕು? ಲೈನ್‌ಗೆ ತೊಂದರೆ ಮಾಡುವುದಿಲ್ಲ, ಆದರೆ ಮರಗಳನ್ನು ಕಡಿಯಬಾರದು, ಕೊಂಬೆ ಕಡಿದು ಎಳೆಯಲಿ ಎಂದು ಸೂಚನೆಯನ್ನು ಹೇಳುತ್ತೇನೆಂದು ಹೇಳಿದ್ದೇನೆ.

ಅಧ್ಯಕ್ಷರು : ಈಗ ಯೋಗೀಶ್ ಭಟ್‌ರವರೆ ಮಾತನಾಡಿ.

ವಿಷಯ : ಮಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ